ಈ) ಬಾಕಿ ಬಿಡುಗಡೆ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ರಾಜ್ಯದಲ್ಲಿ ದಿನಾಂಕ : 31–12–2004 ರವರೆಗೆ 20,226 ಘಟಕಗಳಿಗೆ ರೂ.356.05 ಕೋಟಿ ಸಹಾಯಧನ ಬಿಡುಗಡೆಗೆ ಬಾಕಿ ಇದ್ದು, ಇದರಲ್ಲಿ 2004–05ನೇ ಸಾಲಿನಲ್ಲಿ ಒಟ್ಟು 825 ಘಟಕಗಳಿಗೆ ರೂ.17.57 ಕೋಟಿ ಸಹಾಯಧನ ಮಂಜೂರಾತಿ ಸೇರಿರುತ್ತದೆ.

ಆ) 2004–05ನೇ ಸಾಲಿನಲ್ಲಿ ಮಂಜೂರಾದ ಸಹಾಯಧನದಲ್ಲಿ ಯಾವುದೇ ಬಿಡುಗಡೆ ಮಾಡಿರುವುದಿಲ್ಲ.

ಇ) ದಿ : 31–12–2004 ರವರೆಗೆ 20,226 ಘಟಕಗಳಿಗೆ ರೂ.356.05 ಕೋಟಿ ಸಹಾಯಧನ ಬಾಕಿ ಇರುತ್ತದೆ. (ಇದರಲ್ಲಿ ಕೋಳಿ ಸಾಕಾಣಿಕೆ, ಇಟ್ಟಿಗೆ, ಸ್ವಂತ ಬಂಡವಾಳ ಉದ್ದಿಮೆಗಳು ಸೇರಿರುತ್ತವೆ.)

ಈ) ಪ್ರಸಕ್ತ ಸಾಲಿನಲ್ಲಿ ರಾಜ್ಯ ಸರ್ಕಾರದ ಆದೇಶನ್ವಯ ಕೆ.ಎಸ್.ಎಫ್.ಸಿ. ಬಾಂಡ್ ಮುಖಾಂತರ ರೂ.81.00 ಕೋಟಿ ಮೊತ್ತವನ್ನು ಕ್ರೋಢೀಕರಿಸಿ 6586 ಘಟಕಗಳಿಗೆ ಮಂಜೂರಾಗಿರುವ ಮೊತ್ತದ ಶೇ.50 ರಂತೆ ರೂ.78.43 ಕೋಟಿ ವಿತರಿಸಲಾಗಿದೆ.

ಸರ್ಕಾರಿ ಆದೇಶ ದಿನಾಂಕ : 14–3–2005ರಲ್ಲಿ ರೂ.65.00 ಕೋಟಿ ಸಹಾಯಧನ ಮಂಜೂರಾಗಿದ್ದು, ಸದ್ಯದಲ್ಲೆ ಬಿಡುಗಡೆ ಮಾಡಲಾಗುವುದು. ಬಾಕಿ ಹಣವನ್ನು 2005–06ರಲ್ಲಿ ಹಾಗೂ ನಂತರ ಬಿಡುಗಡೆ ಮಾಡಲಾಗುವುದು.

2691 (3274) ಶ್ರೀ ಪಾಟೀಲ್ ಡಿ. ಆರ್. (ಗದಗ) :– ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಅಧಿಕಾರ ವಹಿಸಿಕೊಂಡ ನಂತರ ವಕ್ಫ್ ಮಂಡಳಿಯಿಂದ ಈವರೆಗೆ ಬಿಡುಗಡೆಯಾದ ಒಟ್ಟು ಅನುದಾನ ಎಷ್ಟು, ಎಷ್ಟು ಸಂಸ್ಥೆಗಳಿಗೆ ನೀಡಲಾಗಿದೆ. (ಜಿಲ್ಲಾವಾರು ವಿವರ ನೀಡಿರಿ);

ಆ) ಗದಗ ಜಿಲ್ಲೆಯಲ್ಲಿ ಯಾವ ಸಂಸ್ಥೆಗಳಿಗೆ ಎಷ್ಟು ಎಷ್ಟು ಅನುದಾನ ಒದಗಿಸಲಾಗಿದೆ. (ವಿಧಾನಸಭಾ ಕ್ಷೇತ್ರವಾರು ಸಂಸ್ಥೆವಾರು ವಿವರ ನೀಡುವುದು)?

ಶ್ರೀ ಮೆರಾಜುದ್ದೀನ್ ಎನ್.ಪಟೇಲ್ (ಪಶುಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) 2004–05ನೇ ಸಾಲಿನಲ್ಲಿ ಸರ್ಕಾರ ವಕ್ಫ್ ಸಂಸ್ಥೆಗಳ ದುರಸ್ತಿ, ನಿರ್ಮಾಣ ಹಾಗೂ ನವೀಕರಣಾಕ್ಕಾಗಿ ರೂ.300.00 ಲಕ್ಷ ಬಿಡುಗಡೆ ಮಾಡಲಾಗಿದ್ದು ವಕ್ಫ್ ಮಂಡಳಿಗಳಿಂದ ಇದುವರೆಗೆ 465 ವಕ್ಫ್ ಸಂಸ್ಥೆಗಳಿಗೆ ರೂ.100.00 ಲಕ್ಷ ಮಂಜೂರು ಮಾಡಲಾಗಿದೆ. ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ. (ಅನುಬಂಧ – I)

ಆ) ಗದಗ ಜಿಲ್ಲೆಯ 7 ವಕ್ಫ್ ಸಂಸ್ಥೆಗಳಿಗೆ ರೂ. 1,40,000 ಬಿಡುಗಡೆ ಮಾಡಲಾಗಿದೆ. ಪಟ್ಟಿ ಲಗತ್ತಿಸಿದೆ. (ಅನುಬಂಧ – II)

ANNEXURE - 1, TO THE UNSTARRED L.A. QUESTION NO.3274, TABLED BY SHRI PATIL D.R., GADAG.

Sl. No.	Name of the District	No. of Wakf institutions	Grant-in-Aid Sanctioned.
1	Hassan	6	Rs.1,20,000-00
2	Kodagu	9	1,80,000-00
3	Chickmagalur	5	1,00,000-00
4	Udupi	3	70,000-00
5	Chamarajanagar	11	2,20,000-00
6	Mandya	14	3,70,000-00
7	Mysore	17	4,00,000-00
8	Mangalore	17	3,90,000-00
9	Bangalore (Urban)	9	2,20,000-00
10	Bangalore (Rural)	32	6,70,000-00
11	Chitradurga	17	3,70,000-00
12	Tumkur	15	3,00,000-00
13	Kolar	34	7,10,000-00
14	Davangere	26	5,20,000-00

15	Shimoga	20	4,20,000-00
16	Bidar	35	8,50,000-00
17	Gulbarga	29	6,40,000-00
18	Bellary	14	3,20,000-00
19	Raichur	23	4,60,000-00
20	Koppal	18	3,60,000-00
21	Haveri	26	5,50,000-00
22	Belgaum	21	4,20,000-00
23	Bagalkote	9	1,90,000-00
24	Bijapur	16	3,50,000-00
25	Gadag	7	1,40,000-00
26	Dharwad	20	4,20,000-00
27	Karwar - U.K	12	2,40,000-00
	Total	**465**	**Rs. 1,00,00,000-00**

ANNEXURE - II, TO THE UNSTARRED L.A.QUESTION NO.3274, TABLED BY SHIRI PATIL D.R. GADAG.

Sl. No.	Name of the Wakf	Purpose	Amount
1	Jamia Masjid, Hesarur	Construction work	Rs.20,000-00
2	Mahaboob Subhani Jumma Masjid, Nayikerur.	Construction work	20,000-00
3	Masdid Noorani Majnur	Construction work	20,000-00

4	Masjid Anjuman Islam Magadi	Construction work	20,000-00
5	Masjid Noorani, Tagginabhana	Construction work	20,000-00
6	Khabrasthan, Anjuman -e-Islam, Soorangi	Fencing work	20,000-00
7	Khabrasthan,Anjuman Islam committee, Yavagai.	Fencing work	20,000-00
		Total	**Rs.1,40,000-00**

2692 (3275) ಶ್ರೀ ಡಿ.ಆರ್. ಪಾಟೀಲ್ (ಗದಗ) :– ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪವರ್ ಲೂಂಗಳೆಷ್ಟು;

ಆ) ವಿದ್ಯುತ್ ದರ ರಿಯಾಯತಿ ಎಷ್ಟು ಪವರ್ ಲೂಮ್‌ಗಳಿಗೆ ಈಗ ಲಭ್ಯವಾಗುವುದು;

ಇ) ರಾಜದಲ್ಲಿ ಈ ರಿಯಾಯತಿ ಸೌಲಭ್ಯ ಪಡೆಯದ ಘಟಕಗಳ ಸಂಖ್ಯೆ ಎಷ್ಟು; ಈ ಘಟಕಗಳಿಗೂ ರಿಯಾಯತಿ ವಿಸ್ತರಿಸಿದರೆ ಆಗುವ ಹೊರೆ ಎಷ್ಟು;

ಈ) ಈ ರಿಯಾಯತಿ ಎಲ್ಲಾ ಘಟಕಗಳಿಗೆ ವಿಸ್ತರಿಸದಿದ್ದರೆ ದೊಡ್ಡ ಘಟಕಗಳಿಗೆ ವಿಭಜನೆಗೆ ಸರ್ಕಾರ ಉತ್ತೇಜನ ನೀಡಿದಂತಾಗುವುದಿಲ್ಲವೇ;

ಉ) ಸರ್ಕಾರ ಈ ತಾರತಮ್ಯ ಹೋಗಲಾಡಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್.ಸಿ. ಮಹದೇವಪ್ಪ (ಜವಳಿ ರಾಜ್ಯ ಸಚಿವರು) :

ಅ) 88,566. (1995–96ನೇ ಗಣತಿ ಪ್ರಕಾರ)

ಆ) 49,4840 ವಿದ್ಯುತ್ ಮಗ್ಗಗಳು ಹಾಗೂ 13,500 ಮಗ್ಗ ಪೂರ್ವ ಸೌಲಭ್ಯ ಘಟಕಗಳಿಗೆ ಈ ರಿಯಾಯತಿ ಲಭ್ಯವಾಗುವುದು.

ಇ) ಇಲಾಖೆಯ ಅಂದಾಜಿನ ಪ್ರಕಾರ ಅಂತಹ 32,500 ವಿದ್ಯುತ್ ಮಗ್ಗಗಳು ಹಾಗೂ 4,800 ಮಗ್ಗ ಪೂರ್ವ ಘಟಕಗಳು ರಾಜ್ಯದಲ್ಲಿದ್ದು, ಅವುಗಳಿಗೆ ಈ ರಿಯಾಯತಿಯನ್ನು ವಿಸ್ತರಿಸಿದಲ್ಲಿ ವರ್ಷಕ್ಕೆ ರೂ.15.50 ಕೋಟಿಗಳಷ್ಟು ಹೆಚ್ಚುವರಿ ಆರ್ಥಿಕ ಹೊರೆ ಉಂಟಾಗಲಿದೆ.